## 29

# “ನಿಮ್ಮ ಹೃದಯಗಳು ಕಳವಳಗೊಳ್ಳದಿರಲಿ”

## (14:1-31)

ಎಲ್ಲಾ ಜನರೂ ಆದರಿಸಲ್ಪಡಲು ಬಯಸುತ್ತಾರೆ. ಕೆಲವು ವರ್ಷಗಳ ಹಿಂದೆ, ದೀರ್ಘ ಕಾಲದ ಮಿಶನರಿಗಳಾದ ಓಟಿಸ್ ಮತ್ತು ಐರೀನ್ ಗೇಟ್‌ವುಡ್ ಎಂಬುವರು ಕೆಲವು ರಾತ್ರಿಗಳನ್ನು ನಮ್ಮ ಮನೆಯಲ್ಲಿ ಕಳೆದರು. ಅವರು ತಮ್ಮೊಂದಿಗೆ ಬಹಳ ಸ್ವಲ್ಪ ಇಂಗ್ಲೀಷ್ ಮಾತಾಡಬಲ್ಲ ಒಬ್ಬ ಜರ್ಮನ್ ಮಹಿಳೆಯನ್ನು ಕರೆದುಕೊಂಡು ಬಂದಿದ್ದರು. ಆಕೆಯು ಮಲಗಬೇಕಾಗಿದ್ದ ಮಲಗುವ ಕೋಣೆಗೆ ಆಕೆಯನ್ನು ಕರೆದುಕೊಂಡು ಹೋದಾಗ, ಪರದೆಗಳನ್ನು ತೆರೆಯ ಬಹುದೋ ಎಂದು ಕೇಳಿದಳು. ಹಾಗೆಯೇ ಕಿಟಕಿಗಳನ್ನು ತೆರೆಯಬಹುದೋ ಎಂದು ಕೇಳಿದಳು. ಹೊರಗೆ ಛಳಿ ಇದ್ದುದರಿಂದ, ಇದು ನಮಗೆ ವಿಚಿತ್ರವಾಗಿ ತೋರಿಸು, ಆದರೆ ನಾವು ಸಂತೋಷದಿಂದ ಆಕೆ ಹೇಳಿದ್ದನ್ನು ಮಾಡಿದೆವು. ಮರುದಿನ ಗೇಟ್‌ವುಡ್ ಅವರು ಆ ಮಹಿಳೆ ಅಂಥ ಅಸಾಮಾನ್ಯವಾದ ಬೇಡಿಕೆಯನ್ನು ಯಾಕೆ ಮಾಡಿದಳು ಎಂಬುದರ ಬಗ್ಗೆ ತಿಳಿಸಿದರು. ಜರ್ಮನಿಯಲ್ಲಿ ಜಾಗತಿಕ ಎರಡನೆಯ ಯುದ್ಧದ ಮುಕ್ತಾಯದ ಸಮಯದಲ್ಲಿ, ಈ ಮಹಿಳೆ ವಾಸಿಸುತ್ತಿದ್ದ ಸ್ಥಳದಲ್ಲಿ ಜರ್ಮನ್ ಮತ್ತು ರಶಿಯನ್ ಸೇನೆಗಳು ಕಠಿಣವಾದ ಯುದ್ಧದಲ್ಲಿ ತೊಡಗಿದ್ದವು. ಒಂದು ತಿಂಗಳಿಂದ ಹೆಚ್ಚು ಕಾಲ ಅವರು, ಆಕೆ ಕತ್ತಲೆಯಲ್ಲಿ ಅಡಗಿಕೊಂಡಿದ್ದ, ಕಿಟಕಿಗಳಿಲ್ಲದ ನೆಲಮಾಳಿಗೆಯಲ್ಲಿ, ಅದೇ ಜನಿಸಿದ ತನ್ನ ಶಿಶುವನ್ನು ಜೋಪಾನ ಮಾಡುತ್ತಿದ್ದ ಮನೆಯ ಮೇಲೆ, ಒಬ್ಬರ ಮೇಲೊಬ್ಬರು ಫಿರಂಗಿ ತುಪಾಕಿಗಳನ್ನು ಎಸೆಯುತ್ತಿದ್ದರು. ಅದು ಭಯಪಡಿಸುವ ಸಮಯವಾಗಿತ್ತು. ಮತ್ತು ಆಕೆ ಹಾಗೂ ಆಕೆಯ ಮಗುವು ಹಸಿವೆಯಿಂದ ಸಾಯುವ ಸ್ಥಿತಿಗೆ ಬಂದಿದ್ದರು. ಅಂತಿಮವಾಗಿ ಯುದ್ಧವು ನಿಂತು ಹೋಯಿತು. ಆಕೆ ತಾನು ಅಡಗಿಕೊಂಡಿದ್ದ ನೆಲಮನೆಯೊಳಗಿಂದ ತಪ್ಪಿಸಿ ಕೊಂಡು ಹೋಗಲು ಶಕ್ತಳಾದಳು. ಅಂದಿನಿಂದ, ಆಕೆ ಕತ್ತಲೆ ತುಂಬಿದ, ಉಸಿರಾಡಿಸಲು ಕಷ್ಟವಾಗುವ ಕಿಟಕಿಗಳಿಲ್ಲದ ಕೋಣೆಯಲ್ಲಿ ಇಡಲ್ಪಡುವದನ್ನು ಬಯಸಲಿಲ್ಲ. ತನ್ನ ಮಗುವನ್ನು ಆದರಿಸುತ್ತ ಕಠಿಣವಾದ ಒಂದು ತಿಂಗಳನ್ನು ಕಳೆದಳು, ಮತ್ತು ಆಕೆ ತನ್ನನ್ನು ಆದರಿಸಿಕೊಳ್ಳುವ ಅಗತ್ಯತೆಯಲ್ಲಿದ್ದಾಳೆ. ನಾವೆಲ್ಲರೂ ಆದರಿಸಲ್ಪಡುವ ಅಗತ್ಯತೆಯಲ್ಲಿದ್ದೇವೆ.

ಯೋಹಾನ 14ರಲ್ಲಿ ತನ್ನ ಶಿಷ್ಯರಿಗೆ ಯೇಸುವಿನ ಸಂದೇಶವು “ನಿಮ್ಮ ಹೃದಯಗಳು ಕಳವಳಗೊಳ್ಳದೆ ಇರಲಿ” (ವಚನ 1ಎ) ಎಂಬ ಆದರಣೆಯ ಮಾತುಗಳಿಂದ ಪ್ರಾರಂಭವಾಯಿತು. 13ನೆಯ ಅಧ್ಯಾಯದ ಘಟನೆಗಳ ಮತ್ತು ಪ್ರವಾದನೆಗಳ ನಂತರ ಈ ಸಂದೇಶದ ಅಗತ್ಯತೆಯಿತ್ತು. ಯೇಸುವನ್ನು ಹಿಡಿದುಕೊಡಲು ಯೂದನು ಬಿಡಲ್ಪಟ್ಟಿದ್ದನು ಮತ್ತು ಅದೇ ರಾತ್ರಿ ಪೇತ್ರನು ಯೇಸುವನ್ನು ಅಲ್ಲಗಳೆಯಲಿಕ್ಕಿದ್ದನು, ಮತ್ತು ಶಿಲುಬೆಯು ಬೇಗನೇ ಸಮೀಪಿಸುತ್ತಲಿತ್ತು. ಮಾನವ ದೃಷ್ಟಿಕೋನದಿಂದ, ಪ್ರತಿಯೊಂದು “ಅಂಟಿಸಲ್ಪಡದೇ ಬರುತ್ತಿತ್ತು” 14ನೆಯ ಅಧ್ಯಾಯದ ಅಂತ್ಯದಲ್ಲಿ “ನಿಮ್ಮ ಹೃದಯಗಳು ಕಳವಳಗೊಳ್ಳದೆ ಇರಲಿ” ಎಂದು ಪುನಃ ಹೇಳಿದನು. “ಹೆದರದಿರಿ” ಎಂದು ಕೂಡಿಸಿದನು (ವಚನ 27). ಆ ಎರಡು “ಪುಸ್ತಕ ಅಂತ್ಯಗಳ” ಮಧ್ಯದಲ್ಲಿಯ ವಚನಗಳು ಯೇಸುವು ಮತ್ತು ಶಿಷ್ಯರು ತಮ್ಮ ಅತೀ ಕಠಿಣವಾದ ತಾಸುಗಳನ್ನು ಒಂದಾಗಿ ಎದುರಿಸಿದಾಗ ಯೇಸುವಿನ ಆದರಣೆಯ ಬೋಧನೆಗಳನ್ನು ಒಳಗೊಂಡಿವೆ. ಈ ಬೋಧನೆಗಳು ಅಪೊಸ್ತಲರನ್ನು ಅವರ “ವಿಶ್ವಾಸದ ಪಯಣದಲ್ಲಿ” ಮುಂದುವರಿಯುವಂತೆ ಸಹಾಯ ಮಾಡಿದವು ಮತ್ತು ಇಂದು ಅವು ನಮ್ಮ ಪ್ರಯಾಣದಲ್ಲಿ

ಸಹಾಯ ಮಾಡಬಲ್ಲವು.

ಅಂಥ ಆದರಿಸುವ ರೀತಿಯಲ್ಲಿ "ಕಳವಳಗೊಳ್ಳುವುದು" ಎಂಬ ಪದವನ್ನು ಯೇಸುವು ಉಪಯೋಗಿಸಿದ್ದು ವಿಶೇಷವಾಗಿ ಗಮನಾರ್ಹವಾದದ್ದಾಗಿದೆ. ಯೋಹಾನನ ಸುವಾರ್ತೆಯಲ್ಲಿ ಇತರ ಮೂರು ಸಮಯಗಳಲ್ಲಿ "ಕಳವಳಗೊಳ್ಳು" ಎಂಬುದು ಯೇಸುವನ್ನೇ ವಿವರಿಸುತ್ತದೆ:

> ಆಕೆ (ಮರಿಯಳು) ಗೋಳಾಡುವದನ್ನೂ ಆಕೆಯ ಸಂಗಡ ಬಂದ ಯೆಹೂದ್ಯರು ಗೋಳಾಡುವದನ್ನೂ ಯೇಸು ಕಂಡಾಗ ಆತ್ಮದಲ್ಲಿ ನೊಂದುಕೊಂಡು ತತ್ತರಿಸಿನು (11:33).
>
> "ಈಗ ನನ್ನ ಪ್ರಾಣವು ತತ್ತರಿಸುತ್ತದೆ; ಮತ್ತು ನಾನೇನು ಹೇಳಲಿ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು" (12:27).
>
> "ಇದನ್ನು ಹೇಳಿ ಯೇಸು ಆತ್ಮದಲ್ಲಿ ತತ್ತರಗೊಂಡು ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನೆಂದು ಸ್ಪಷ್ಟವಾಗಿ ಹೇಳಿದನು" (13:21).

ತೊಂದರೆ ಪಡಿಸಲ್ಪಡುವಂಥದ್ದು ಸ್ವಾಭಾವಿಕವಾದದ್ದಾಗಿದೆ ಮತ್ತು ನಿರಾಶೆಯ ಪರಿಸ್ಥಿತಿಗೆ ನಿರೀಕ್ಷಿತ ಪ್ರತಿಕ್ರಿಯೆಯಾಗಿದೆ. ನಮ್ಮ ಜೀವಿತಗಳಲ್ಲಿ ಸಂಗತಿಗಳು ತಪ್ಪಾಗಿ ಹೋಗುವಾಗ ನಮಗೆ ತೊಂದರೆಗಳು ಬರುತ್ತವೆ. ನಿಶ್ಚಯವಾಗಿಯೂ, ತೊಂದರೆಪಡಿಸಲ್ಪಡುವ ಸಮಯವಿದ್ದರೆ, ಅದು ಯೇಸುವು ಶಿಲುಬೆಗೆ ಹಾಕಲ್ಪಟ್ಟ ದಿನವಾಗಿದೆ. ಯೇಸುವು ತನ್ನ ಶಿಷ್ಯರನ್ನು ಈ ಘಟನೆಗಾಗಿ, ತನ್ನನ್ನು ನಂಬಲಿಕ್ಕೆ ಅವರನ್ನು ಕರೆಯುವದರಿಂದ (14:1) ಮತ್ತು ಅವರೊಂದಿಗೆ ಕೆಲವು ವಿಶೇಷ ಮೂಲಗಳನ್ನು ಬಿಡುವದರಿಂದ ಸಿದ್ಧತೆ ಪಡಿಸಿದನು.

## ಒಂದು ಸ್ಥಳವನ್ನು ಸಿದ್ಧಮಾಡುವುದು (14:2, 3)

ಈ ಮಾತುಗಳಲ್ಲಿ ಹೇಳಿದ ನಂತರ ಸ್ವಲ್ಪ ಸಮಯದಲ್ಲಿ ಯೇಸುವನ್ನು ಬಂದಿಸಿ ತರಲು ಕಳುಹಿಸಲ್ಪಟ್ಟ ಸೈನಿಕರಿಂದ ಆತನು ಹಿಡಿದುಕೊಂಡು ಒಯ್ಯಲ್ಪಟ್ಟನು (8:1-12). ಇದು ಸಂಭವಿಸಿದಾಗ, ಶಿಷ್ಯರು ಒಬ್ಬಂಟಿಗರಾಗಿ ಬಿಡಲ್ಪಟ್ಟರು. ಅವರು ಇದರಿಂದ ಕ್ಷೋಭ ಗೊಂಡವರಾಗಿರಬೇಕು. ನಮ್ಮ ಬಾಲ್ಯಪ್ರಾಯದಿಂದ, ತಳ್ಳಲ್ಪಡುವುದು ನಮ್ಮ ಅತೀ ದೊಡ್ಡ ಭಯಗಳಲ್ಲಿ ಒಂದಾಗಿತ್ತು. ಈ ಭಯದಿಂದ ನಾವೆಂದೂ ಹೊರಬರಲಾರವೆಂಬಂತೆ ತೋರುತ್ತದೆ.

ಡಾ. ಜೇಮ್ಸ್ ಡೊಬ್ಸನ್ ಎಂಬವರು ತನ್ನ "Focus on the Family" ರೇಡಿಯೋ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡ ಒಬ್ಬ ವಿಶೇಷ ಅತಿಥಿಯ ಬಗ್ಗೆ ಹೇಳಿದರು. ಆಕೆಯು ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ನಾಝೀ ಸಂಹಾರ ಕ್ಯಾಂಪಿನಲ್ಲಿ ವರ್ಷಗಳನ್ನು ಕಳೆದ ಒಬ್ಬ ರಶ್ಯಿಯನ್ ಮಹಿಳೆಯಾಗಿದ್ದಳು. ಆಗ ಆಕೆ ಯುದ್ಧದನಂತರ ತಾನು ಹೇಗೆ ಯುನೈಟೆಡ್ ಸ್ಟೇಟ್ಸ್‌ಗೆ ಬಂದಳು ಮತ್ತು ಮದುವೆಯಾದಳು ಎಂಬುದರ ಬಗ್ಗೆ ವಿವರಣೆ ಕೊಟ್ಟಳು. ಆಕೆಯ ಗಂಡ ಅಪನಂಬಿಗಸ್ತನಾಗಿ ಅನಂತರ ಆಕೆಯನ್ನು ತ್ಯಜಿಸಿ ಬಿಟ್ಟದ್ದು ದುಃಖಕರವಾದ ಸಂಗತಿಯಾಗಿತ್ತು. ಡೊಬ್ಬನ್ ಅವರು ಆಕೆಯೊಂದಿಗೆ ಮಾತಾಡಿಂತೆ, ಆ ಸ್ತ್ರೀಯು, ಜರ್ಮನ್ ಡೆತ್ ಕ್ಯಾಂಪಿನಲ್ಲಿಯ ತನ್ನ ವರ್ಷಗಳಿಗಿಂತ ತನ್ನ ಮದುವೆಯಲ್ಲಿ ತಿರಸ್ಕಾರ ಮತ್ತು ತಳ್ಳಿ ಬಿಡುವಿಕೆಯ ಅನುಭವವು ಹೆಚ್ಚು ನೋವಿನದಾಗಿತ್ತು ಎಂದು ಅವರಿಗೆ ಹೇಳಿದಳು!

ಒಬ್ಬಂಟಿಗರಾಗಿ ಬಿಡಲ್ಪಡುವುದು ಎಷ್ಟು ಭಯಂಕರವಾಗಿರುವೆಂಬುದನ್ನು ತಿಳಿದು ಕೊಂಡು ಯೇಸುವು ತನ್ನ ಶಿಷ್ಯರಿಗೆ ತನ್ನ ಬರಲಿಕಿದ್ದ ಇಲ್ಲದಿರುವಿಕೆಯ ಬಗ್ಗೆ ಯೋಚಿ

ಸುವದಕ್ಕೆ ಒಂದು ಮಾರ್ಗವನ್ನು ಕೊಟ್ಟನು. ಅದನ್ನು ತಳ್ಳಲ್ಪಟ್ಟಿರುವದೆಂಬುದಾಗಿ ದೃಷ್ಟಿಸದೆ, ಅವರು ಯೇಸುವು ಅವರಿಗಾಗಿ ಒಂದು ಸ್ಥಳವನ್ನು ಸಿದ್ಧಪಡಿಸಲು ತನ್ನ ತಂದೆಯ ಮನೆಗೆ ಹೋಗುತ್ತಿರುವ ಸಮಯದಂತೆ ಅದನ್ನು ನೋಡಬೇಕೆಂದು ಅವರಿಗೆ ಹೇಳಿದನು (14:2, 3). ಯೇಸುವಿನ ದೈಹಿಕ ಇಲ್ಲದಿರುವಿಕೆಯ ಬಗ್ಗೆ ಯೋಚಿಸುವದಕ್ಕೆ ಇದೆಂಥ ಅದ್ಭುತಕರವಾದ ರೀತಿಯಾಗಿರುವದಿಲ್ಲವೇ!

ಇಂದು ನಾವು ತಳ್ಳಲ್ಪಟ್ಟಿದ್ದೇವೆ ಮತ್ತು ದೇವರಿಂದ ಕೈಬಿಡಲ್ಪಟ್ಟಿದ್ದೇವೆ ಎಂದು ನಂಬಲಿಕ್ಕೆ ಸಮಸ್ಯೆಗಳು ಕಾರಣವಾಗುವಾಗ, ಶಿಲುಬೆಯ ಬಳಿಯಲ್ಲಿ ತಾವು ಕೈಬಿಡಲ್ಪಟ್ಟಿದ್ದೇವೆಂದು ಭಾವಿಸಿದಾಗ ಶಿಷ್ಯರಿಗೆ ಯೇಸುವು ಏನನ್ನು ಬೋಧಿಸಿದನೆಂಬುದನ್ನು ನಾವು ಜ್ಞಾಪಿಸಿಕೊಳ್ಳ ತಕ್ಕದ್ದು: ನಾವು ದೇವರೊಂದಿಗೆ ಸದಾಕಾಲವೂ ಇರುವದಕ್ಕಾಗಿ ಒಂದು ಸ್ಥಳವನ್ನು ಯೇಸುವು ಸಿದ್ಧಪಡಿಸುತ್ತಿರುವನೆಂಬುದನ್ನು ನಾವು ಜ್ಞಾಪಿಸಿಕೊಳ್ಳತಕ್ಕದ್ದು!

## ಅಪ್ಪಿಕೊಳ್ಳಲು ಒಂದು ಮಾರ್ಗ (14:4-11)

ಅವರಿಗಾಗಿ ಒಂದು ಸ್ಥಳವನ್ನು ಸಿದ್ಧಪಡಿಸಲಿಕ್ಕೆ ತಾನು ಹೋಗುವೆನೆಂದು ಯೇಸುವು ತನ್ನ ಶಿಷ್ಯರಿಗೆ ಹೇಳಿದ ನಂತರ ತೋಮನು, "ಸ್ವಾಮೀ, ನೀನು ಎಲ್ಲಿಗೆ ಹೋಗುತ್ತೀಯೋ ನಮಗೆ ತಿಳಿಯದು, ಮಾರ್ಗವು ಹೇಗೆ ತಿಳಿದೀತು?" ಎಂದು ಹೇಳಿದನು (14:5). "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (14:6) ಎಂದು ಯೇಸು ಉತ್ತರ ಕೊಟ್ಟನು. ಇನ್ನೊಬ್ಬ ಶಿಷ್ಯನಾದ ಫಿಲಿಪ್ಪನು, "ಸ್ವಾಮೀ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು" (14:8) ಎಂದು ಹೇಳಿದನು. ಯೇಸುವು ಬಹುಶಃ ತನ್ನ ಹೃದಯದಲ್ಲಿ ನಿಟ್ಟುಸುರಿನೊಂದಿಗೆ, "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ ..." (14:9ಬಿ) ಉತ್ತರಕೊಟ್ಟನು. ಅವರ ಗಲಿಬಿಲಿಯಿದ್ದರೂ, ಯೇಸುವು ಅವರು ತನ್ನೊಂದಿಗೆ ಶಿಲುಬೆಯನ್ನು ಎದುರಿಸಲು ಸಿದ್ಧಪಡಿಸುವಂತೆ ತಮ್ಮ ಎಲ್ಲಾ ಗಮನವನ್ನು ಇಡಬೇಕಾದದ್ದು ತನ್ನ ಮೇಲೆ ಎಂದು ಒತ್ತಿ ಹೇಳಿದನು.

ನಾವು ದೇವರ ಬಳಿಗೆ ಬರಲು ಬಯಸುತ್ತೇವೆಯೋ? ನಾವು ಆತನಿಗೆ ಸಮೀಪದಲ್ಲಿರಲು ಬಯಸುತ್ತೇವೆಯೋ? ನಾವು ಆತನ ಬಳಿಗೆ ಹೇಗೆ ಬರಬಹುದು? "ತಂದೆಯ ಬಳಿಗೆ ಬರಲು" ತಾನೊಬ್ಬನೇ ಮಾರ್ಗವೆಂದು ಯೇಸು ಹೇಳಿದನು. ಶಿಲುಬೆಗೆ ಮೊದಲು ರಾತ್ರಿಯಲ್ಲಿ ಅದು ನಿಜವಾಗಿತ್ತು, ಮತ್ತು ಅದು ಇಂದು ಸತ್ಯವಾಗಿದೆ.

ತನ್ನ ಒಂದು ಮಕ್ಕಳ ಪುಸ್ತಕದಲ್ಲಿ,[1] ಮ್ಯಾಕ್ಸ್ ಲುಕಾಡೋ ಎಂಬುವನು ಒಬ್ಬ ಅರಸನ ಬಗ್ಗೆ ಪ್ರೇರೇಪಿತವಾದ ಚಿಕ್ಕ ಕಥೆಯನ್ನು ಹೇಳಿದನು. ಆ ಅರಸನು ತನ್ನ ಮಗಳನ್ನು ಯಾರು ಮದುವೆಯಾಗುತ್ತಾರೆ ಮತ್ತು ಮುಂದಿನ ಅರಸನಾಗುತ್ತಾನೆ ಎಂಬುದರ ಬಗ್ಗೆ ಒಂದು ಪಂದ್ಯವನ್ನು ಏರ್ಪಡಿಸಲು ನಿರ್ಣಯಿಸಿಕೊಂಡನು. ಮೂವರು ಸರದಾರರು ಹುರಿಯಾಳುಗ ಳಾಗಿದ್ದರು: ಕಾಲ್ಲಾಲೈ ಬಲಶಾಲಿಯು, ಆಲೊನ್ ತ್ವರಿತನು, ಮತ್ತು ಕಸ್ಸಿಡೊನ್, ಬುದ್ಧಿ ವಂತನು ಅವರ ಕರ್ತವ್ಯವು ಹೋಪ್‌ನೊಟ್ಸ್ ಎಂದು ತಿಳಿಯಲ್ಪಟ್ಟ ಪೀಡಿಸುವ ಜನರಿಂದ ತುಂಬಿದ್ದ ಗಂಡಾಂತರಕರವಾದ ಅಡವಿಯನ್ನು ದಾಟಿ ಹೋಗುವಂಥದ್ದಾಗಿತ್ತು. ಇನ್ನೊಂದು ಬದಿಯಲ್ಲಿರುವ ಕೋಟೆಯನ್ನು ಮೊದಲು ತಲುಪುವ ಸರದಾರನು ರಾಜಕುಮಾರಿಯನ್ನು ಮದುವೆಯಾಗುವನು ಎಂಬ ಒಪ್ಪಂದವಿತ್ತು. ಅರಸನು ಕೋಟೆಯ ಗೋಡೆಗಳಿಂದ ದಿನಕ್ಕೆ ಮೂರು ಸಲ ತನ್ನ ಕೊಳಲಿನಿಂದ ವಿಶೇಷ ಸಂಗೀತ ಬಾರಿಸುವದರಿಂದ ಹುರಿಯಾಳುಗಳಿಗೆ ಅಡವಿಯಲ್ಲಿ ಮಾರ್ಗದರ್ಶನ ಮಾಡುವನು. ಹೀಗಿದ್ದರೂ, ಅರಸನು ತನ್ನ ಕೊಳಲನ್ನು ಊದುವದರಿಂದ ಸರದಾರನಿಗೆ ಮಾರ್ಗದರ್ಶನ ಮಾಡುವಾಗ, ಹೋಪ್‌ನೊಟ್ಸ್‌ರು ಪ್ರಯಾಣಿಕರಿಗೆ ದಾರಿತಪ್ಪಿಸಲು ಅರಸನ ಅನುಕರಣೆ ಮಾಡಿ ಬಾರಿಸುವರು. ಪ್ರತಿಯೊಬ್ಬ ಸರದಾರನಿಗೆ ತನ್ನ

ಮಾರ್ಗದಲ್ಲಿ ಸಹಾಯಮಾಡಲಿಕ್ಕೆ ತನ್ನೊಂದಿಗೆ ಅಡವಿಯಲ್ಲಿ ಹೋಗುವಾಗ ಒಬ್ಬ ಸಹಾಯಕನನ್ನು ತೆಗೆದು ಕೊಂಡು ಹೋಗಬಹುದಾಗಿತ್ತು.

ಮೂವರು ಶೂರ ಸರದಾರರು ಅಡವಿಯನ್ನು ಪ್ರವೇಶಿಸಿದರು ಮತ್ತು ಕೋಟೆಯ ಕಡೆಗೆ ಹೊರಟರು. ಅಂತ್ಯದಲ್ಲಿ, ಕಸ್ಸಿಡೊನ್, ಬುದ್ಧಿವಂತನು, ಅರಸ ಬಳಿಗೆ ಮೊದಲನೆಯವನಾಗಿ ತಲುಪಿದನು. ಅವನು ಅದನ್ನು ಹೇಗೆ ಮಾಡಿದನು? ಅವನು ಅರಸನ ಮಗ, ರಾಜ ಕುಮಾರನನ್ನು ಅರಣ್ಯದಲ್ಲಿ ತನ್ನ ಜೊತೆಗಾರರನ್ನಾಗಿ ಆಯ್ದುಕೊಂಡಿದ್ದನು. ರಾಜ ಕುಮಾರನು ತನ್ನ ತಂದೆಯ ಹಾಡನ್ನು ತಿಳಿದಿದ್ದನು ಮತ್ತು ತಾನೇ ಅದನ್ನು ಪರಿಪೂರ್ಣವಾಗಿ ಬಾರಿಸಬಲ್ಲವನಾಗಿದ್ದನು. ಅವರು ಪ್ರಯಾಣ ಮಾಡಿದಂತೆ, ಕಸ್ಸಿಡೊನ್‌ನು ಗಮನವಿಟ್ಟು ಕೇಳಿಸಿಕೊಂಡನು. ರಾಜಕುಮಾರನ ಹಾಡನ್ನು ಕೇಳಿದ್ದನ್ನು ಹೋಲಿಸುವಾಗ, ಅವನು ಹೋಪ್‌ನೊಟ್ಸ್‌ರ ಅನುಕರಣೆಯ ಹಾಗೂ ಅರಸನ ನಿಜವಾದ ಹಾಡಿನ ಮಧ್ಯದಲ್ಲಿಯ ವ್ಯತ್ಯಾಸವನ್ನು ಗುರುತಿಸಲು ಶಕ್ತನಾದನು.

ಯೇಸುವು ತನ್ನ ಶಿಷ್ಯರು, ತಾನು ಅವರಿಂದ ತೆಗೆದುಕೊಂಡು ಹೋಗಲ್ಪಡುವಾಗ, ಗಲಿಬಿಲಿಗೊಳ್ಳುವರು, ನಿರಾಶರಾಗುವರು ಎಂಬುದನ್ನು ತಿಳಿದುಕೊಂಡು ಅವರ ನ್ಯಾಯವಿಚಾರಣೆಯ ಸಮಯದಲ್ಲಿ ನೋಡುವದಕ್ಕಾಗಿ ನಿರ್ದೇಶನ ಕೊಟ್ಟನು. ಅವರು ಆತನ ಹೆಜ್ಜೇಜಾಡಿನಲ್ಲಿ ನಡೆಯಬೇಕು, ಯಾಕಂದರೆ ಆತನು ಮಾತ್ರವೇ ಅವರನ್ನು ತಂದೆಯ ಬಳಿಗೆ ನಡಿಸುವ ನಂಬಲರ್ಹ ಮಾರ್ಗದರ್ಶಿಯಾಗಿದ್ದಾನೆ. ಇಂದು ಯೇಸುವಿನ ಸಂದೇಶವು ನಮಗಾಗಿ ಅದೇ ಆಗಿದೆ. ಆತನನ್ನು ನೋಡಲು ಮತ್ತು ನಮ್ಮ ಕಠಿಣವಾದ ಸಮಯಗಳಲ್ಲಿ ಆತನ ಹಿಂದೆ ನಡೆಯಲು ನಮ್ಮನ್ನು ಆತನು ಕರೆಯುತ್ತಾನೆ. "ನನ್ನನ್ನು ಹಿಂಬಾಲಿಸಿರಿ! ಬಿರುಗಾಳಿಗಳ ಮುಖಾಂತರವೂ, ನೀವು ನೋಡದೇ ಇರುವಾಗಲೂ, ಅರ್ಥವಿಲ್ಲದ್ದಾಗಿ ತೋರುವಾಗಲೂ, ನಿಮಗೆ ಆಳವಾದ ಸಂಶಯಗಳು ಇರುವಾಗಲೂ - ನಿಮ್ಮ ಅತೀ ಕತ್ತಲೆಯ ತಾಸಿನಲ್ಲಿಯೂ ನನ್ನನ್ನೂ ಹಿಂಬಾಲಿಸಿರಿ. ನೀವು ತಂದೆಯ ಬಳಿಗೆ ಬಂದಿರುವಿರಿ ಎಂಬುದನ್ನು ನೀವು ಕಂಡುಕೊಳ್ಳುವಿರಿ" ಎಂದು ಆತನು ಹೇಳುತ್ತಾನೆ!

## ಅನುಭವಿಸಲಿಕ್ಕೆ ಒಂದು ಸಾನ್ನಿಧ್ಯ (14:12-14)

ನನ್ನ ಮೆಚ್ಚಿಕೆಯ ಕೆಲವು ಕಥೆಗಳು ಮಕ್ಕಳು ಒಬ್ಬಂಟಿಗರಾಗಿ ಮಲಗಲು ಭಯಪಡುವದರಿಂದ ಮಧ್ಯರಾತ್ರಿಯಲ್ಲಿ ಎದ್ದು ತಮ್ಮ ತಂದೆ ತಾಯಿಗಳ ಬಳಿಗೆ ಬರುವಂಥದ್ದರ ಬಗ್ಗೆ ಇರುತ್ತವೆ. ಒಬ್ಬ ಚಿಕ್ಕ ಬಾಲಕಿಗೆ ಆಕೆಯ ತಂದೆ ತಾಯಿಗಳು ದೇವರು ಆಕೆಯನ್ನು ಕಾಯುವದರಿಂದ ಆಕೆ ಹಿಂದಿರುಗಿ ಹೋಗಿ ಸಮಾಧಾನದಿಂದ ಮಲಗಿಕೊಳ್ಳಬೇಕೆಂದು ಹೇಳಿದರು. ಆದರಣೆಯ ಆ ಮಾತುಗಳ ಬಗ್ಗೆ ಆಕೆ ಪ್ರಭಾವಿತಳಾಗದೇ, "ಅದು ಸತ್ಯವಾಗಿರಬಹುದು, ಈ ರಾತ್ರಿ ನನ್ನೊಂದಿಗೆ ಯಾರಾದರೂ ಬಂದು ಮಲಗುವ ಅಗತ್ಯತೆ ನನಗಿದೆ" ಎಂದು ಉತ್ತರ ಕೊಟ್ಟಳು. ಇನ್ನೊಂದು ಮಗುವು ತನ್ನ ತಂದೆ ತಾಯಿಗಳ ಬಳಿಗೆ ಬಂದು ತನಗೆ ಭಯವಾಗುತ್ತಿದೆ ಎಂದು ಹೇಳಿದನು. ದೇವರು ಅವನೊಂದಿಗೆ ಅವನ ಕೋಣೆಯಲ್ಲಿರುವನು ಮತ್ತು ಅವನು ಭಯಪಡುವ ಅಗತ್ಯತೆಯಿಲ್ಲ ಎಂದು ಮನವೊಲಿಸಲು ಅವನ ತಂದೆ ಪ್ರಯತ್ನಿಸಿದನು. ಈ ಮಗವೂ ಸಹ ಒಂದು ವಿವರಣೆಗಿಂತ ಹೆಚ್ಚಿನದನ್ನು ಬಯಸಿದನು. ಅವನು ತನ್ನ ತಂದೆಗೆ, "ನೀನು ಹೋಗಿ ದೇವರೊಂದಿಗೆ ಯಾಕೆ ಮಲಗಿಕೊಳ್ಳಬಾರದು, ನಾನು ಮಮ್ಮಿಯೊಂದಿಗೆ ಮಲಗಲಿಕ್ಕೆ ಬಿಡು" ಎಂದು ಸೂಚಿಸಿದನು?

ಗಲಿಬಿಲಿಗೊಂಡ ತನ್ನ ಶಿಷ್ಯರಿಗೆ ಆಡಸಿಸುವದಕ್ಕಾಗಿ ಯೇಸುವು ಒದಗಿಸಿದ ಮೂರನೆಯ ಆಧಾರವು ಅವರ ಜೀವನಗಳಲ್ಲಿ ತನ್ನ ಸತತವಾದ ಪ್ರಸನ್ನತೆಯ ವಾಗ್ದಾನವಾಗಿತ್ತು. ಆತನು ಅವರಿಗೆ ತನ್ನ ಹೆಸರಿನಲ್ಲಿ ಅವರು ಕೇಳಿದ್ದೆಲ್ಲವನ್ನೂ ಮಾಡುವೆನೆಂದೂ ಮತ್ತು ಒಂದು ದಿನ ಅವರು ಆತನು ಮಾಡುವದನ್ನು ನೋಡಿದ್ದಕ್ಕಿಂತಲೂ ಹೆಚ್ಚು ದೊಡ್ಡ ಕಾರ್ಯಗಳನ್ನು ಮಾಡುವರೆಂದೂ ಭರವಸೆಕೊಟ್ಟನು (14:12-14)! ಆತನ ದೈಹಿಕ ಇಲ್ಲದಿರುವಿಕೆಯು ಅವರನ್ನು

ಆದರಿಸುವ ಮತ್ತು ಅವರಿಗೆ ಸಹಾಯ ಮಾಡುವ ತನ್ನ ಸಾಮರ್ಥವನ್ನು ಮಿತಿಗೊಳಿಸುವದಿಲ್ಲ. ಅವರು ತಮ್ಮ ಅತೀ ಕತ್ತಲೆಯಾದ ತಾಸುಗಳಲ್ಲಿಯೂ ಅವರು ನಂಬುವಂಥ ವಾಗ್ದಾನವನ್ನು ಆತನು ಕೊಟ್ಟಿದ್ದನು.

## ನಿರೀಕ್ಷಿಸಲಿಕ್ಕೆ ಒಬ್ಬ ಸಹಾಯಕನು (14:16-18, 25, 26)

ಯೇಸುವು ತನ್ನ ಶಿಷ್ಯರಿಗೆ ಸ್ವಲ್ಪಕಾಲದ ನಂತರ ತಾನು "ಹೊರಟು ಹೋಗುತ್ತೇನೆ" ಎಂದು ಒಂದಕ್ಕಿಂತ ಹೆಚ್ಚು ಸಲ ವಿವರಿಸಿದನು.[2] ಹೀಗಿದ್ದರೂ, ಆತನು ಅವರಿಗೆ ತಾನು ಹೊರಟು ಹೋಗುವುದು ಅವನ್ನು ಅನಾಥರನ್ನಾಗಿ ಬಿಡುವದಿಲ್ಲವೆಂದು ತಿಳಿಸಿದನು (14:18). ತನ್ನ ಸ್ಥಳದಲ್ಲಿ ಆತನು ಅವರಿಗೆ "ಒಬ್ಬ ಸಹಾಯಕನನ್ನು" ಕಳುಹಿಸುವನು (14:16, 26),[3] "ಸಹಾಯಕನು" ಎಂಬುದಕ್ಕಾಗಿ ಗ್ರೀಕ್ ಪದವು, "ಜೊತೆಯಲ್ಲಿ ಬರುವಾತನು" ಎಂದರ್ಥ ವಾಗುತ್ತದೆ, ನ್ಯಾಯಾಲಯದ ಹಿನ್ನೆಲೆಯಲ್ಲಿ ಅದು ಒಬ್ಬನ ಪರವಾಗಿ ಮಾತಾಡುವ ನ್ಯಾಯವಾದಿಗೆ ಸಂಬಂಧಿಸಿರುತ್ತದೆ. ಇತರ ಹಿನ್ನಲೆಗಳಲ್ಲಿ, ಅಗತ್ಯತೆಯ ಸಮಯದಲ್ಲಿ ಸಹಾಯಕನಾಗಿರುವ ಯಾವನಾದರೂ ಎಂದರ್ಥ ಕೊಡುತ್ತದೆ. ಇವೆಲ್ಲವೂ ಯೇಸುವು ತಾನು ಹೊರಟು ಹೋದ ನಂತರ ತನ್ನ ಶಿಷ್ಯರಿಗೆ ಕಳುಹಿಸಿದ ಪರಿಶುದ್ಧಾತ್ಮನನ್ನು (14:26) ವಿವರಿಸುತ್ತವೆ.

ಪರಿಶುದ್ಧಾತ್ಮನು, ಯೇಸುವಿನಂತೆ ದೈವಿಕನಾಗಿದ್ದಾನೆ ಮತ್ತು "ಅದು" ಎಂದು ಅಲ್ಲ ಆದರೆ "ಆತನು" ಎಂದು ಮಾತಡಲ್ಪಡಬೇಕು. ಆತನು ಇಂದು ಸಭೆಯಲ್ಲಿ (1 ಕೊರಿಂಥ 3:16) ಮತ್ತು ವೈಯಕ್ತಿಕ ಕ್ರೈಸ್ತರಲ್ಲಿ (1 ಕೊರಿಂಥ 6:19) ಜೀವಿಸುತ್ತಾನೆ. ಆತನು ಹೆಚ್ಚೆಚ್ಚಾಗಿ ನಮ್ಮನ್ನು ಕ್ರಿಸ್ತನ ಸಾರೂಪಕ್ಕೆ ಮಾರ್ಪಡಿಸುವ ಬಲವಾಗಿದ್ದಾನೆ (2 ಕೊರಿಂಥ 3:18) ಮತ್ತು ನಮ್ಮ ಜೀವಿತಗಳಲ್ಲಿ ದೇವರ ಫಲವನ್ನು ಉತ್ಪಾದಿಸುತ್ತಾನೆ (ಗಲಾತ್ಯ 5:22, 23). ತನ್ನ ಶಿಷ್ಯರಿಗೆ ಯೇಸುವಿನ ವಾಗ್ದಾನಕ್ಕನುಗುಣವಾಗಿ, ಪರಿಶುದ್ಧಾತ್ಮನು ದೇವರ ಜನರ ಜೀವಿತಗಳಲ್ಲಿ ಆದರಣೆಯ ಮತ್ತು ಸಹಾಯದ ದೊಡ್ಡ ಮೂಲವಾಗಿದ್ದಾನೆ. ಆತ್ಮನು ನಮ್ಮೊಂದಿಗೆ ನಮ್ಮ ಮಧ್ಯದಲ್ಲಿ ಮತ್ತು ನಮ್ಮಲ್ಲಿ ಇರುವ ಕಾರಣದಿಂದ, ಯೇಸುವು ಈ ಲೋಕದಲ್ಲಿ ದೈಹಿಕವಾಗಿ ಇರದಿದ್ದರೂ ನಾವು ಆತ್ಮೀಕ ವಾಗಿ "ಅನಾಥರಾಗಿರುವದಿಲ್ಲ."

ಒಂದು ಲಂಡನ್ ಬೀದಿಯ ಮೂಲೆಯಲ್ಲಿ ಜಿ. ಕೆ. ಚಸ್‌ಟರ್‌ಟಾನ್ ಅವರು ಒಬ್ಬ ಸುದ್ದಿವರದಿಗಾರನೊಂದಿಗೆ ನಿಂತುಕೊಂಡಿರುವಾಗ ಅವನು, "ಅಯ್ಯಾ, ಇತ್ತೀಚೆಗೆ ನೀವು ಕ್ರೈಸ್ತರಾದಿರಿ ಎಂದು ನನಗೆ ತಿಳಿದು ಬಂತು. ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳಲೇ?" ಎಂದು ಹೇಳಿದನು. ನಿಶ್ಚಯವಾಗಿ ಎಂದು ಚಸ್‌ಟರ್ ಟಾನ್ ಉತ್ತರಕೊಟ್ಟರು. ಆ ಮನುಷ್ಯನು, "ಉತ್ಥಾನವಾದ ಕ್ರಿಸ್ತನು ಈ ಸಮಯದಲ್ಲಿ ಫಕ್ಕನೇ ಕಾಣಿಸಿಕೊಂಡರೆ ಮತ್ತು ನಿನ್ನ ಹಿಂದೆ ನಿಂತು ಕೊಂಡರೆ, ನೀವು ಏನು ಮಾಡುವಿರಿ?" ಎಂದು ಕೇಳಿದನು. "ಆತನು ಇರುತ್ತಾನೆ" ಎಂದು ಚಸ್‌ಟರ್‌ಟಾನ್ ಉತ್ತರ ಕೊಟ್ಟರು.

ಪರಿಶುದ್ಧಾತ್ಮನ ವ್ಯಕ್ತಿತ್ವದಲ್ಲಿ ಯೇಸುವು ಇಂದು ನಮ್ಮೊಂದಿಗೆ ಇದ್ದಾನೆ. ನಾವು ಒಬ್ಬಂಟಿಗರಾಗಿ ಬಿಡಲ್ಪಟ್ಟಿಲ್ಲ; ನಾವು ಆತ್ಮೀಕ ಅನಾಥರಾಗಿರುವದಿಲ್ಲ. ಮೊದಲಿನ ಶಿಷ್ಯರಿಗಾಗಿ ಇದ್ದಂತೆಯೇ ನಮಗಾಗಿ ನಮ್ಮ ಜಗತ್ತು ತೊಂದರೆ ಕೊಡುತ್ತಿರುವಾಗಲೂ, ಇದು ಆದರಣೆಯ ಅಗಾಧವಾದ ಮೂಲವಾಗಿದೆ.

## ವಿಧೇಯರಾಗಲು ಒಂದು ಆಜ್ಞೆ (14:15, 20, 21, 23, 24, 31)

ಯೇಸುವು ತನ್ನ ಶಿಷ್ಯರಿಗೆ ಕೊಟ್ಟ ಆದರಣೆಯ ಇನ್ನೊಂದು ಮೂಲವು ಆಜ್ಞೆಗಳ ಒಂದು ಸರಣಿಯಾಗಿದೆ. ಆದರಣೆ ಕೆಡುವವುಗಳಂತೆ ಆಜ್ಞೆಗಳ ಬಗ್ಗೆ ನಾವು ಯೋಚಿಸದಿದ್ದರೂ, ದೇವರು ನಮ್ಮಿಂದ ಏನನ್ನು ನಿರೀಕ್ಷಿಸುವನು ಎಂಬ ತಿಳುವಳಿಕೆಯನ್ನು ಅವು ನಮಗೆ ಕೊಡುತ್ತವೆ. ಅದನ್ನು ತಿಳಿದು ಕೊಳ್ಳುವುದು ನಮಗೆ ಭರವಸೆಯನ್ನು ಕೊಡುತ್ತದೆ.

14ನೆಯ ಅಧ್ಯಾಯದಲ್ಲಿ ಯೇಸುವು ತನ್ನ ಹಿಂಬಾಲಕರಿಗೆ ತನ್ನ ಆಜ್ಞೆಗಳನ್ನು ಕೈಕೊಳ್ಳ ಬೇಕು ಮತ್ತು ತನಗೆ ವಿಧೇಯರಾಗಬೇಕು ಎಂದು ಪುನಃ ಪುನಃ ಕರೆದಿದ್ದಾನೆ. ಅಂಥ ಭಾಷೆಯು ಪ್ರೀತಿಗೆ ವಿರೋಧವಾದದ್ದಾಗಿದೆ ಎಂದು ಕೆಲವರು ಯೋಚಿಸುತ್ತಾರೆ. ಹೀಗಿದ್ದರೂ, ಯೇಸುವು ವಿಧೇಯತೆ ಮತ್ತು ಪ್ರೀತಿ ಒಂದಕ್ಕೊಂದು ಭಿನ್ನವಾಗಿರುವವೆಂದು ಎಂದೂ ನೋಡಲಿಲ್ಲ. ಅದರ ಬದಲು, ಆತನು, "ನನ್ನ ಆಜ್ಞೆಗಳನ್ನು ಹೊಂದಿ, ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು; ..." (14:21) ಎಂದು ಹೇಳಿದನು, ದೇವರಿಗಾಗಿ ಪ್ರೀತಿಯು ಆತನಿಗೆ ವಿಧೇಯತೆಯಲ್ಲಿ ವ್ಯಕ್ತಪಡಿಸಲ್ಪಟ್ಟಿದೆ.

ಯೇಸುವಿಗೆ, ವಿಧೇಯತೆಯು ಶಿಲುಬೆಯ ಮೇಲೆ ಸಾಯುವದಾಗಿತ್ತು (14:31). 13ರಿಂದ 19ನೆಯ ವರೆಗಿನ ಅಧ್ಯಾಯಗಳಲ್ಲಿ ದಾಖಲೆಯಾದ ದೀರ್ಘವಾದ ಮತ್ತು ಶ್ರಮೆಯ ರಾತ್ರಿಯ ನಂತರ, ಯೇಸುವು ಬಂಧಿಸಲ್ಪಟ್ಟನು. ಮರುದಿನ ಆತನು ಲೋಕದ ಪಾಪಗಳಿಗಾಗಿ ಶಿಲುಬೆಗೆ ಹಾಕಲ್ಪಟ್ಟನು. ಇದನ್ನು ಮಾಡುವದರಲ್ಲಿ ಆತನು ತನ್ನ ಶಿಷ್ಯರಿಗೆ ತನ್ನ ಮಾತುಗಳಿಂದ ಮಾತ್ರವಲ್ಲದೇ, ತನ್ನ ಉದಾಹರಣೆಯಿಂದಲೂ ಸಲ ವಿಧೇಯತೆಯ ಮಹತ್ವವನ್ನು ಬೋಧಿ ಸಿದನು. ವಿಧೇಯತೆಯು ದೇವರಿಗಾಗಿ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ವಿಧಾನವಾಗಿದೆ.

## ಮುಕ್ತಾಯ

ಆತನು ತನ್ನ ಉಪದೇಶವನ್ನು ಮುಂದುವರಿಸಿದಂತೆ, ಯೇಸುವು ಹೀಗೆ ಹೇಳಿದನು. "ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡು ತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ, ಹೆದರದಿರಲಿ" (14:27). ಈ ಅಧ್ಯಾಯವು "ನಮ್ಮ ಹೃದಯವು ಕಳವಳಗೊಳ್ಳದೆ ಇರಲಿ" ಎಂಬ ಕರೆಯಿಂದ ಪ್ರಾರಂಭವಾಯಿತು ಮತ್ತು ಸಮಾಧಾನದ ವಾಗ್ದಾನದೊಂದಿಗೆ ಮುಕ್ತಾಯಗೊಂಡಿತು. ಸಮಾಧಾನವು ನಾವು ಅಪೇಕ್ಷಿಸುವಂಥದ್ದಾಗಿದೆ ಆದರೆ ನಿರೂಪಿಸುವದರಲ್ಲಿ ತೊಂದರೆಯಿರುತ್ತದೆ. ಬಹಳ ಸಲ, ನಕಾರಾತ್ಮಕವಾದ ಮಾತುಗಳಲ್ಲಿ ಸಮಾಧಾನವನ್ನು ವಿವರಿಸುತ್ತದೆ; ಸಮಾಧಾನವು, ಯುದ್ಧವಿಲ್ಲದೇ ಇರುವುದು, ಶ್ರಮೆ, ನೋವು ಹಾಗೂ ಹಾನಿಯಿಲ್ಲದೇ ಇರುವುದು ಎಂದು ನಾವು ಯೋಚಿಸುತ್ತೇವೆ. ಹೀಗಿ ದ್ದರೂ, ಯೇಸುವು ಹೆಚ್ಚು ಸಕಾರಾತ್ಮಕವಾದ ಮಾತುಗಳಲ್ಲಿ ವಿವರಿಸಿದನು; ಅದು ದೇವರ ಸಾನಿಧ್ಯವಾಗಿರುತ್ತದೆ. ಸಮಾಧಾನದ ಬಗ್ಗೆ ನೀವು ಯಾವ ರೀತಿಯಲ್ಲಿ ಯೋಚಿಸುವಿರಿ?

ಯೇಸುವು ಒದಗಿಸಿದ ಸಮಾಧಾನವು ಕಳ್ಳನಿಂದ ಕದ್ದು ಕೊಳ್ಳಲಾರದಂಥ, ಕೊಲೆಗಾರನಿಂದ ಕೊಲ್ಲಲ್ಪಡಲಾರದಂಥ ಇಲ್ಲವೇ ಮಧ್ಯರಾತ್ರಿಯ ದುಃಖಕರವಾದ ಸುದ್ಧಿಯಿಂದ ಗಲಿಬಿಲಿಗೊಳಿಸಲಾರದಂಥ ಸಮಾಧಾನವಾಗಿದೆ. ಕ್ರಿಸ್ತನ ಸಮಾಧಾನವು ದೇವರ ಸನ್ನಿಧಿಯಾಗಿದೆ. ಆತನ ಸಮಾಧಾನವು ಜ್ಞಾನೋಕ್ತಿ 31:25 ರಲ್ಲಿ ವಿವರಿಸಲ್ಪಟ್ಟ "ಯೋಗ್ಯ ಮಹಿಳೆಯಂತೆ" ಆಗಲು ನಮಗೆ ಕಾರಣವಾಗುತ್ತದೆ: "ಬಲವನ್ನೂ ತೇಜಸ್ಸನ್ನೂ ಹೊಂದ್ದುಕೊಂಡಿರುವಳು; ಭವಿಷ್ಯತ್ತಿನ ಭಯವಿಲ್ಲದೆ ನಗುತ್ತಿರುವಳು." ನಾವೂ ಸಹ, ದೇವರು ನಮ್ಮೊಂದಿಗಿರವನು ಎಂದು ತಿಳಿದು ಕೊಂಡು ಅನಿಶ್ಚಿತವಾದ ಭವಿಷ್ಯತ್ತಿನ ಕಡೆಗೆ ನಗಬಹುದು.

ಯೇಸುವು ತನ್ನ ಶಿಷ್ಯರಿಗೆ ಈ ಆದರಣೆಯ ಮಾತುಗಳನ್ನು ಹೇಳಿದ ಸಮಯದಲ್ಲಿ, ಅವರು ಆತನ ಮರಣದ ಗಲಿಬಿಲಿಯನ್ನು ಮತ್ತು ವೇದನೆಯನ್ನು ಎದರಿಸಬೇಕಾಗಿತ್ತು. ಇಂದು, ನೀನು ಮತ್ತು ನಾನು ... ಎದುರಿಸಲಿಕ್ಕಿದ್ದೇವೆ, ನಾವು ಏನನ್ನು ಎದುರಿಸಲಿಕ್ಕಿದ್ದೇ ವೆಂದು ತಿಳಿದಿರುವದಿಲ್ಲ, ಅಲ್ಲವೇ? ಜೀವನದ ಅನಿಶ್ಚಿತವಾದ ಮಾರ್ಗದಲ್ಲಿ ನಾವು ಪ್ರಯಾಣ ಮಾಡುತ್ತದ್ದಂತೆ, ನಾವೂ ಸಹ "ವಿಶ್ವಾಸದ ಪಯಣದಲ್ಲಿ" ಮುಂದುವರಿಯೋಣ. ಹಾಗೆ ಮಾಡುವದರಿಂದ, ಯೇಸುವು ತನ್ನ ಮೊದಲು ಶಿಷ್ಯರಿಗೆ ಮಾಡಿದಂತೆ ಬರಲಿಕ್ಕಿದ್ದ

ಯಾವುದಕ್ಕಾದರೂ ಆತನು ನಮ್ಮನ್ನು ಸಿದ್ಧಮಾಡಿದ್ದಾನೆಂದು ತಿಳಿದು "ಭವಿಷ್ಯದ ಕಡೆಗೆ ನಗೋಣ."

ಟಿಪ್ಪಣಿಗಳು

[1]Max Lucado, *Tell Me the secrets* (Wheaton, Ill.: Crossway Book, 1993), 28-30.
[2]ನೋಡಿರಿ. 13:33, 36; 14:2. [3]"ಸಹಾಯಕನು" ಎಂಬುದು "ಆಲೋಚನಾ ಕರ್ತನ" (NIV), "ಆದರಿಕನು" (KJV), ಇಲ್ಲವೆ "ನ್ಯಾಯವಾದಿಯು" (NRSV), ಎಂದೂ ಭಾಷಾಂತರಿಸಲ್ಪಡಬಹುದು.